# ಡಾ. ಚಂದ್ರಶೇಖರ ಕಂಬಾರರ ಚಾಂದಬೀ ಸರಕಾರದ ಎರಡು ಸ್ತ್ರೀ ಪಾತ್ರಗಳ ವಿವೇಚನೆ

**ಗಂಗಾಧರ ಬಿ.ಎಂ.***

**DOI: https://doi.org/10.5281/zenodo.21242019**

**ABSTRACT**

ಜ್ಞಾನಪೀಠ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರರ 'ಚಾಂದಬೀ ಸರಕಾರ' ಕಾದಂಬರಿಯಲ್ಲಿ ಬರುವ ಪ್ರಮುಖ ಸ್ತ್ರೀ ಪಾತ್ರಗಳಾದ ಚಾಂದಬೀ ಮತ್ತು ಬಡ್ಡಿ ಬಂಗಾರಮ್ಮನವರ ವ್ಯಕ್ತಿತ್ವಗಳ ತುಲನಾತ್ಮಕ ವಿಶ್ಲೇಷಣೆಯನ್ನು ಇಲ್ಲಿ ಮಂಡಿಸಲಾಗಿದೆ. ಶೋಷಣೆಯ ವಿರುದ್ಧ ಸಿಡಿದೆದ್ದು, ಶಿವಾಪುರದ ಜನತೆಗೆ ನ್ಯಾಯ, ಅನ್ನ, ಶಿಕ್ಷಣ ಮತ್ತು ಸಮಾನತೆಯನ್ನು ಒದಗಿಸುವ ಮೂಲಕ ಗಾಂಧಿ ಮಾರ್ಗದಲ್ಲಿ ಸಾಗುವ 'ಚಾಂದಬೀ' ಸಕಾರಾತ್ಮಕ ಬದಲಾವಣೆಯ ಸಂಕೇತವಾಗಿದ್ದಾಳೆ. ಇದಕ್ಕೆ ವ್ಯತಿರಿಕ್ತವಾಗಿ, ವಿದ್ಯಾವಂತಳಾಗಿದ್ದರೂ ತನ್ನ ಸ್ವಾರ್ಥ, ಲಾಭಕೋರತನ ಮತ್ತು ಅನೈತಿಕ ಹಾದಿಯ ಮೂಲಕ ಜನಸಾಮಾನ್ಯರನ್ನು ಶೋಷಿಸುವ 'ಬಡ್ಡಿ ಬಂಗಾರಮ್ಮ' ನಕಾರಾತ್ಮಕ ಶಕ್ತಿಯಾಗಿ ಕಂಡುಬರುತ್ತಾಳೆ. ಅಂತಿಮವಾಗಿ ಬಂಗಾರಮ್ಮನ ದುರಾಸೆಯೇ ಅವಳ ದುರಂತ ಅಂತ್ಯಕ್ಕೆ ಕಾರಣವಾಗುತ್ತದೆ. ಸಮಾಜವನ್ನು ಒಳಿತು ಮತ್ತು ಕೆಡುಕಿನೆಡೆಗೆ ಕೊಂಡೊಯ್ಯುವಲ್ಲಿ ಮಹಿಳಾ ಶಕ್ತಿ ಬೀರಬಹುದಾದ ಗಾಢವಾದ ಪ್ರಭಾವವನ್ನು ಹಾಗೂ ನೈತಿಕ-ಅನೈತಿಕ ನೆಲೆಗಳ ನಡುವಿನ ತಾತ್ವಿಕ ಸಂಘರ್ಷವನ್ನು ಈ ವಿಶ್ಲೇಷಣೆ ಅತ್ಯಂತ ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತದೆ.

**KEYWORDS:** ಚಾಂದಬೀ ಸರಕಾರ, ಡಾ. ಚಂದ್ರಶೇಖರ ಕಂಬಾರ, ಬಡ್ಡಿ ಬಂಗಾರಮ್ಮ, ಸ್ತ್ರೀ ಪಾತ್ರಗಳು, ಸಾಮಾಜಿಕ ಪರಿವರ್ತನೆ.

* **ಗಂಗಾಧರ ಬಿ.ಎಂ.,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್.

ವರಕವಿ ಬೇಂದ್ರೆಯವರ ನಂತರ ಉತ್ತರ ಕರ್ನಾಟಕದ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ದೇಸಿಯತೆಯನ್ನು ತಮ್ಮ ಸಾಹಿತ್ಯದಲ್ಲಿ ಒಡಮೂಡಿಸುತ್ತಿರುವ ಹಿರಿಯ ಸಾಹಿತಿ ಡಾ. ಚಂದ್ರಶೇಖರ ಕಂಬಾರ. ಸದ್ಯದ ಕನ್ನಡ ಸಾಹಿತ್ಯ ಲೋಕದ ಹಿರಿಯರಲ್ಲಿ ಒಬ್ಬರಾಗಿರುವ ಅವರು ತಮ್ಮ ಸಾಹಿತ್ಯಕ ಚಟುವಟಿಕೆಗಳನ್ನು ಇಂದಿಗೂ ಗಂಭೀರವಾಗಿ ಮುಂದುವರೆಸುತ್ತಿದ್ದಾರೆ. ಈ ಹಾದಿಯಲ್ಲಿ ಇತ್ತೀಚಿನ ಅವರ 'ಚಾಂದಬೀ ಸರಕಾರ' ಕಾದಂಬರಿಯು ಅವರ ಸೃಜನಶೀಲತೆ ಮತ್ತು ಜನಪ್ರೀತಿಯ ಸಂಗಮದಂತೆ ಕಂಡುಬರುತ್ತದೆ.

ಚಾಂದಬೀ ಸರ್ಕಾರ ಕಾದಂಬರಿಯು ತನ್ನ ಶೀರ್ಷಿಕೆ ಮತ್ತು ಕಥಾವಸ್ತುವಿನಿಂದ ಗಮನಸೆಳೆಯುತ್ತದೆ. ಕಾದಂಬರಿಯಲ್ಲಿ ಪುರುಷ ಪಾತ್ರಗಳಂತೆಯೇ ಮಹಿಳಾ ಪಾತ್ರಗಳು ಪ್ರಾಮುಖ್ಯತೆ ಪಡೆದಿವೆ. ಕಾದಂಬರಿಯಲ್ಲಿ ನಿರೂಪಿತವಾಗಿರುವ ಸಮಾಜ, ರಾಜಕೀಯ, ಸಂಸ್ಕೃತಿಗಳ ಮೇಲೆ ಈ ಮಹಿಳೆಯರ ಪ್ರಭಾವ ಗಾಢವಾಗಿದೆ. ಈ ದೃಷ್ಟಿಯಲ್ಲಿ ಕಾವೇರಿ, ಚಾಂದಬೀ, ಬಡ್ಡಿ ಬಂಗಾರಮ್ಮ, ಗಜನಿಂಬವ್ವ, ಡಾ. ಕುಸುಮ, ಸುಮತಿಯಂತಹ ಸ್ತ್ರೀ ಪಾತ್ರಗಳು ಮನದಲ್ಲಿ ಬಹುಕಾಲ ನಿಲ್ಲುತ್ತವೆ. ಇವರಲ್ಲಿ ಚಾಂದಬೀ ಸರಕಾರ ಮತ್ತು ಬಡ್ಡಿ ಬಂಗಾರಮ್ಮನ ಪಾತ್ರಗಳು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ನಿಂತಿರುವ ಪಾತ್ರಗಳಾಗಿ ಕಾಣುತ್ತವೆ. ಈ ಪ್ರಭಾವಶಾಲಿ ಸ್ತ್ರೀಯರು ಇಡೀ ಶಿವಾಪುರವನ್ನು ಆವರಿಸುವ ಬಗೆ ಅಚ್ಚರಿ ಹುಟ್ಟಿಸುತ್ತದೆ.

ಕಂಬಾರರು ಮುನ್ನುಡಿಯಲ್ಲಿ ತಿಳಿಸುವಂತೆ, ಬಾಲ್ಯದಲ್ಲಿ ಬಯಲಾಟದಲ್ಲಿ ಅವರು ಕಂಡ ಅದ್ಭುತ ಪ್ರತಿಭೆ ಚಾಂದಬೀ. ತನ್ನ ಪ್ರಯೋಗಗಳಿಂದಲೇ ಹೆಸರಾದವಳು ಆಕೆ. "ಅವಳ ಹಾಡುಗಾರಿಕೆ, ಕೃಷ್ಣಭಕ್ತಿ, ದೇವರಂತೆ ಭಕ್ತನೂ ಶ್ರೇಷ್ಠನೇ ಎಂಬ ಆಕೆಯ ವಾದಸರಣಿಯಿಂದ ಪ್ರಭಾವಿತನಾದವನು ನಾನು" (ಪುಟ–1) ಎಂದು ಅವರು ನೆನಪಿಸಿಕೊಂಡಿದ್ದಾರೆ. ಇಂತಹ ಐತಿಹಾಸಿಕ ಸ್ತ್ರೀ ವ್ಯಕ್ತಿತ್ವವನ್ನು ಶಿವಾಪುರದ ವೇದಿಕೆಯಲ್ಲಿಟ್ಟು ಅಲ್ಲಿನ ಭಾಷಾ ಸೊಗಡು ಮತ್ತು ಜನಪದೀಯ ಸಂಸ್ಕೃತಿಯ ತೊಡುಗೆಯನ್ನು ತೊಡಿಸಿ ಮತ್ತೆ ಜೀವಂತವಾಗಿರುವುದು ಕಂಬಾರರ ಸೃಜನಶೀಲತೆಯ ಪ್ರತಿಭೆಯಾಗಿದೆ.

ಕಾದಂಬರಿಯ ಶೀರ್ಷಿಕೆಯಾಗುವಷ್ಟು ಪ್ರಸಿದ್ಧಳಾಗಿರುವ ಚಾಂದಬೀಯು ಮೂಲತಃ ಜೋಗತಿ (ದೇವದಾಸಿ)ಯೊಬ್ಬಳ ಮಗಳು. ಅವಳ ಮೂಲ ಹೆಸರು ಶೀಲವಂತಿ. ಅವಳ ತಾಯಿ ನಿಂಬವ್ವ. ಅವಳ ಬದುಕು ಹರಿಯುವ ನದಿಯಂತಹದು. ಅವಳು ಹುಟ್ಟಾ ಕಲಾವಿದೆ. ಭಜನಾ ಮಂಡಳಿಗಳಲ್ಲಿ ಸುಶ್ರಾವ್ಯವಾಗಿ ಹಾಡುತ್ತಿದ್ದ ಅವಳನ್ನು ಪಾರಿಜಾತ ನಾಟಕದ ಉಸ್ತಾದ್ ಅಲಿ ಆಗಾಖಾನ್ ಕಂಡನು. ಆಕೆಯ ಗಾನಸಿರಿಗೆ ಸೋತು ಆಕೆಯ ತಾಯಿಯಿಂದ ಬೇಡಿ ಪಡೆದನು. ಶ್ರೀಕೃಷ್ಣ ಪಾರಿಜಾತದ ಬಯಲಾಟದಲ್ಲಿ ಆಕೆ ಪೂರ್ವರಂಗದ ರಾಧೆಯಾಗಿ ಕೃಷ್ಣನಾಗಿದ್ದ ಆಗಾಖಾನ್‌ನ ಮನವನ್ನೂ ಗೆದ್ದಳು. ಗುರುದಕ್ಷಿಣೆಯಾಗಿ ಆಕೆಯನ್ನೇ ಪಡೆದು ಆತ ಮಡದಿಯಾಗಿಸಿಕೊಂಡ. ಶೀಲವಂತಿ ಎಂಬ ಹೆಸರನ್ನು ಚಾಂದಬೀ ಎಂದು ಬದಲಿಸಿದ. ಇಷ್ಟೇ ಆಗಿದ್ದರೆ ಆಕೆ ಕಾದಂಬರಿಯ ಶೀರ್ಷಿಕೆಯಾಗುತ್ತಿರಲಿಲ್ಲ. ಕೇವಲ ಕಲಾವಿದೆಯಾಗಿರುತ್ತಿದ್ದಳು ಅಷ್ಟೇ. ಆದರೆ ಅದಕ್ಕೆ ಬದಲಾಗಿ ಚಾಂದಬೀಯ ಬದುಕಿನ ತಿರುವುಗಳು ಆಕೆಯನ್ನು ಬಲದೇವನ ಹೆಂಡತಿಯಾಗುವಂತೆ ಮಾಡುತ್ತದೆ. ಆಗ ಚಾಂದಬೀಯು ಚಾಂದಬೀ ಸರಕಾರವಾಗುತ್ತಾಳೆ. ದಬ್ಬಾಳಿಕೆ, ಕುತಂತ್ರ, ವಂಚನೆ, ಅನ್ಯಾಯಗಳ ವ್ಯವಸ್ಥೆಯಲ್ಲಿ ಶಿವಾಪುರದ ಬಡಜನತೆಗೆ ನ್ಯಾಯ, ನೆಮ್ಮದಿ, ಹಸಿವಿಗೆ ಅನ್ನ, ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸುವ ಮಹಾತಾಯಿಯಾಗಿ ಪರಿವರ್ತಿತಳಾಗುತ್ತಾಳೆ. ಈ ಮೂಲಕ 'ಹೆಣ್ಣು ಸಮಾಜದ ಕಣ್ಣು' ಎಂಬ ಮಾತನ್ನು ನಿಜವಾಗಿಸುತ್ತಾಳೆ.

ಅಲಿ ಆಗಾಖಾನ್‌ನ ಮಡದಿಯಾಗಿ ನಾಟಕದಲ್ಲಿ ಮತ್ತು ಅವನ ಸುಖದಲ್ಲಿ ಹೊಸ ಎತ್ತರ ಮುಟ್ಟಿಸುವ ಚಾಂದಬೀ ಕೃಷ್ಣನ ಭಕ್ತೆ. ಆಕೆ ಗರ್ಭಿಣಿಯಾದಾಗ ಬಯಸುವುದು ಕೃಷ್ಣನಂತಹ ಮಗನನ್ನು. ಆದರೆ ಆಗಾಖಾನ್‌ನ ಮೊದಲ ಪತ್ನಿಯ ಅಸಹನೆ ಮತ್ತು ದುಷ್ಟತನದಿಂದಾಗಿ ಆಕೆ ತನ್ನ ಕರುಳ ಬಳ್ಳಿಯು ಬಲಿಯುವುದಕ್ಕೆ ಮೊದಲೇ ಕಳೆದುಕೊಂಡು ನಿರಾಶೆಗೆ ಈಡಾಗುತ್ತಾಳೆ. ಇದಕ್ಕೆ ಕಾರಣ ಆಗಾಖಾನ್‌ನ ಪತ್ನಿ ಎಂದು ತಿಳಿಯುತ್ತಾಳೆ. ತನಗೆ ತಂದೆ ತಾಯಿಯ ಮಮಕಾರ ತೋರಿದ ವಾಮನರಾಯ ಮತ್ತು ಅಂಬಾಬಾಯಿಯ ಆಶ್ರಯಕ್ಕೆ ತೆರಳುತ್ತಾಳೆ. ವಯಸ್ಸಾದ ವಾಮನರಾಯರು ಶ್ರೀಕೃಷ್ಣ ಪಾರಿಜಾತ ನಾಟಕದ ದೊಡ್ಡ ವಿದ್ವಾಂಸರು. ಅವರಿಗೆ ಒಂದು ನಾಟಕ ತಂಡ ಕಟ್ಟುವ ಸ್ಫೂರ್ತಿ ನೀಡುವ ಚಾಂದಬೀಯು ಸತ್ಯಭಾಮೆಯ ಪಾತ್ರದಲ್ಲಿ ಪರಕಾಯ ಪ್ರವೇಶದ ಮೂಲಕ ರಸಿಕರ ಮನಗಳಿಗೆ ಲಗ್ಗೆ ಇಡುತ್ತಾಳೆ. ಇಂತಹದೊಂದು ಸಂದರ್ಭದಲ್ಲಿ ಶಿವಾಪುರದ ನಾಯಕ ಬಲದೇವನ ಕಣ್ಣಿಗೆ ಬೀಳುತ್ತಾಳೆ. ಈಗಾಗಲೇ ಹೆಂಡತಿಯ (ಕಾವೇರಿ) ಅಕಾಲಿಕ ಮರಣದಿಂದ ನೊಂದು ನಾಟಕಗಳ ದಾಸನಾಗಿರುವ ಬಲದೇವನು ಚಾಂದಬೀಯನ್ನು ಮನಸಾರೆ ಒಪ್ಪಿದ್ದಷ್ಟೇ ಅಲ್ಲದೆ ಅವಳ ಹಿನ್ನೆಲೆ ಅರಿತು ವಾಮನರಾಯನನ್ನು ಬೇಡಿ, ಒಪ್ಪಿಸಿ ಶಾಸ್ತ್ರೋಕ್ತ ವಿವಾಹ ಮಾಡಿಕೊಳ್ಳುತ್ತಾನೆ. ಸಹಜ ಮತ್ತು ಸರಳ ವ್ಯಕ್ತಿತ್ವದ ಬಲದೇವ ನಾಯಕನ ಮಾತುಗಳಿಗೆ ವಾಮನರಾಯರು ಒಪ್ಪಲೇ ಬೇಕಾಗುತ್ತದೆ. ವಯಸ್ಸಾದ ದಂಪತಿಗಳಿಗೆ ಅದು ಸೂಕ್ತವಾದ ತೀರ್ಮಾನವೂ ಆಗಿರುತ್ತದೆ.

ಮದುವೆಯಾಗಿ ಶಿವಾಪುರಕ್ಕೆ ಬಂದ ಚಾಂದಬೀಯು 'ಚಾಂದಬೀ ಸರಕಾರ'ವಾಗಿ ಬದಲಾಗುತ್ತಾಳೆ. ತನ್ನ ಉದಾರತೆ, ಕರುಣೆ, ದಯಾಪ್ರೀತಿಗಳಿಂದ ಜನಮನವನ್ನು ಗೆಲ್ಲುತ್ತಾಳೆ. ಈ ಗೆಲುವು ಮುಂದೆ ಮನೋಳಿಯ ಅಯ್ಯಾ ಸರ್ಕಾರದ ಕುಟಿಲತೆಗಳ ವಿರುದ್ಧದ ಗೆಲುವಾಗಿ ಬದಲಾಗುವುದು ಕಾದಂಬರಿಯ ವೈಶಿಷ್ಟ್ಯತೆಯಾಗಿದೆ. ಇಡೀ ಕಾದಂಬರಿಯಲ್ಲಿ ಅವಳ ರೂಪ, ಕಲಾಪ್ರತಿಭೆ, ಸಾಂದರ್ಭಿಕ ಧೈರ್ಯ, ಸಹನೆ, ದೃಢ ತೀರ್ಮಾನ, ಮಮಕಾರ, ಕರುಣೆ ಮತ್ತು ಶಾಂತಿಯ ವ್ಯಕ್ತಿತ್ವ ತುಂಬಿದೆ. ಅವಳ ಆಗಮನದಿಂದ ಶಿವಾಪುರಕ್ಕೆ ಹೇಗೋ ಬಲದೇವನ ಬದುಕಿಗೂ ಹಸಿರು ಮೂಡುತ್ತದೆ. ವಿರೋಧಿಗಳ ಅಸೂಯೆಗೆ ಕಾರಣವಾಗುವ ಆಕೆಯ ಉಪಸ್ಥಿತಿಯು ವಿರೋಧಿಗಳ ಸಾವುಗಳಿಗೆ ಕಾರಣವಾಗುವುದು ಜಾನಪದ ನಂಬಿಕೆಗಳಂತೆ ಭಾಸವಾಗುತ್ತದೆ. ಇವಳ ಎದುರು ಕುತಂತ್ರಿ ಅಯ್ಯಾ ಸರ್ಕಾರ ಸೋಲಲೇ ಬೇಕಾಗುತ್ತದೆ. ಇವಳಿಂದ ದೊರಕುವ ಸಮಾನತೆಯ ಆಶಯದ ಹೊಸ ಸಮಾಜ, ಅರ್ಥಪೂರ್ಣ ಪ್ರಜಾಪ್ರಭುತ್ವ ಮತ್ತು ನೆಮ್ಮದಿಯ ಬದುಕು ಶಿವಾಪುರದ ಜನರಿಗೆ ದೊರೆಯುವುದು ಕಾದಂಬರಿಯ ಆಶಾವಾದವನ್ನು ಸಮರ್ಥಿಸುತ್ತದೆ. ರಾಜ್ಯದಲ್ಲಿ ದೇವರಾಜ ಅರಸು ಅವರ ಹೊಸ ಸರ್ಕಾರ ಬರುವ, ಭೂಸುಧಾರಣೆಗಳನ್ನು ಅನುಷ್ಠಾನಗೊಳಿಸುವ ಸೂಚನೆಯೂ ಕಾದಂಬರಿಯಲ್ಲಿ ಮೂಡಿಬಂದಿದೆ.

ಚಾಂದಬೀ ಕಲಾವಿದೆ. ಆದರೂ ಅವಳ ಒಳಗಿನ ಮಾತೃಹೃದಯ ದೊಡ್ಡದು. ಮಾನವೀಯತೆ ಇನ್ನೂ ದೊಡ್ಡದು. ಕಾದಂಬರಿಯಲ್ಲಿ ಬಲದೇವನ ಮೊದಲ ಹೆಂಡತಿಯ (ಕಾವೇರಿ) ಮಗ ಕೃಷ್ಣನನ್ನು ಆಕೆ ಒಪ್ಪುವ, ಪ್ರೀತಿಸುವ ಸನ್ನಿವೇಶಗಳು ಹೃದಯಂಗಮವಾಗಿವೆ. ಕೊನೆಯಲ್ಲಿ ಕೃಷ್ಣನೇ ಬಲದೇವನ ಜೀವ ಉಳಿಸುವ, ಚಾಂದಬೀಯ ಮಾನ ಕಾಪಾಡುವ ನಾಯಕನಾಗಿ ವಿಜೃಂಭಿಸಿರುವುದು ಶಿವಪುರಕ್ಕೆ ಬರಲಿರುವ ಒಳ್ಳೆಯ ದಿನಗಳಿಗೆ ಸಂಕೇತವಾಗಿದೆ.

ಚಾಂದಬೀಯಂತೆ ಶಿವಾಪುರದ ಬದುಕಿನ ಮೇಲೆ ಪ್ರಭಾವ ಬೀರಿದ ಮತ್ತೊಬ್ಬ

ಮಹಿಳೆ ಬಡ್ಡಿ ಬಂಗಾರಮ್ಮ. ವಿದ್ಯಾವಂತಳಾದ ಈಕೆ ಶಿವಾಪುರದ ಬದುಕನ್ನು ನರಕ ಸದೃಶ ಮಾಡುವ ಪರಿ ಆಶ್ಚರ್ಯ ಹುಟ್ಟಿಸುತ್ತದೆ. ತನಗೆ ಸಿಕ್ಕ ಅವಕಾಶಗಳನ್ನು ಅದ್ಭುತವಾಗಿ ಲಾಭದಾಯಕವಾಗಿಸಿಕೊಳ್ಳುವ ಈಕೆ ಮನೋಳಿ ಸಂಸ್ಥಾನದ ಅಯ್ಯಾ ಸರಕಾರನನ್ನೇ ಮರುಳುಗೊಳಿಸುತ್ತಾಳೆ. ಗಂಡಸರನ್ನು ತನ್ನ ತಾಳಕ್ಕೆ ಕುಣಿಯುವಂತಹ ವ್ಯವಸ್ಥೆಯೊಂದನ್ನು ಸೃಷ್ಟಿಸುತ್ತಾಳೆ. ಚಾಂದಬೀಯು ಶಿವಾಪುರದಲ್ಲಿ ಸಕಾರಾತ್ಮಕ ಬದಲಾವಣೆಗೆ ಕಾರಣಳಾದರೆ, ಬಂಗಾರಮ್ಮ ನಕಾರಾತ್ಮಕ ಬದಲಾವಣೆಗೆ ಕಾರಣಳಾಗಿರುವುದು ಕಾದಂಬರಿಯ ವಿಚಿತ್ರವಾಗಿದೆ.

ಶಿವಾಪುರದ ಅಯ್ಯಾ ಸರಕಾರದ ಬಾರುಗಳ ವ್ಯವಹಾರವನ್ನು ಸೂಕ್ಷ್ಮವಾಗಿ ಅವಲೋಕಿಸಿ ತಾನು ಕಾಲೇಜಿನಲ್ಲಿ ಕಲಿತ ವಿದ್ಯೆಯನ್ನು ಅವನ ಲಾಭಕ್ಕೆ ಸಮರ್ಪಣೆ ಮಾಡುವ, ಅನೈತಿಕ ವ್ಯವಹಾರಗಳಿಗೆ ಬಲಿಯಾಗುತ್ತಾಳೆ ಬಡ್ಡಿ ಬಂಗಾರಮ್ಮ. ಚಾಂದಬೀಯದಂತೆ ಬಂಗಾರಮ್ಮನದೂ ಚಲನಶೀಲತೆಯ ಬದುಕು. ಕರ್ನಾಟಕ ಕಾಲೇಜಿನಲ್ಲಿ ಬಿಎ ಪಾಸು ಮಾಡಿದ ಈಕೆ ಅವಕಾಶ ಸಿಕ್ಕಾಗ ಅಮೆರಿಕಾವನ್ನೂ ನೋಡಿ ಬಂದವಳು. ಆದರೆ ಶಿವಾಪುರದ ರೈತ ಈರಪ್ಪನ ಮಗ ಸೋಮಾರಿ ಪುಂಡಲೀಕನ ಪತ್ನಿಯಾಗುವುದು ಅವಳ ಬಾಳಿನ ವಿಪರ್ಯಾಸವಾಗುತ್ತದೆ. ಆದರೆ ಅಂತಹ ವಿಪರ್ಯಾಸಗಳನ್ನು ತನ್ನ ಚಾಣಾಕ್ಷತೆಯಿಂದ ಮೀರುವ ಛಲವಂತೆ ಬಂಗಾರಮ್ಮ. ಆಕೆ ಅಯ್ಯಾ ಸರಕಾರದ ಬಾರುಗಳ ವ್ಯವಹಾರವನ್ನು ಲಾಭದ ತುತ್ತತುದಿಗೆ ತಲುಪಿಸುತ್ತಾಳೆ. ವ್ಯವಹಾರಕ್ಕೊಂದು ಹೊಸ ಅನೈತಿಕ ಆಯಾಮ ಕೊಡುತ್ತಾಳೆ. ಕಲ್ಕಿದಳವನ್ನು ಸ್ಥಾಪಿಸಿ ರೈತರಿಂದ ಸಾಲ ವಸೂಲಿ ಮಾಡುತ್ತಾಳೆ. ಕಲ್ಕಿದಳವೆಂಬ ಈ ತಮಿಳು ತಿಗುಳರ ಪಡೆಯನ್ನು ಸಾಕಿ ಜನಸಾಮಾನ್ಯರ ರಕ್ತ ಹೀರುತ್ತಾಳೆ. ಇದರ ಜೊತೆಗೆ ಕರುಬಾರಿ ನೀಲಕಂಠ, ಮನೋಳಿ ಸಂಸ್ಥಾನದ ಚಿನ್ನದ ಹಲ್ಲುಸೆಟ್ಟಿನ ಅಯ್ಯಾ ಸರಕಾರ, ಚಾಂದಗಢದ ಮರಾಠಿ ಜಗನ್ನಾಥನ ಮಗ ಇವರೊಡನೆ ಅವಳದು ಅಕ್ರಮ ಸಂಬಂಧ. ಅದಕ್ಕೆ ಅವರೊಡನೆಯ ವ್ಯವಹಾರಿಕ ಸಂಬಂಧವೇ ಹೊರತು ನೈಜ ಪ್ರೀತಿಯೇನಲ್ಲ. ತನ್ನ ದೇಹವನ್ನೂ ಆಕೆ ವ್ಯವಹಾರದ ಯಶಸ್ಸಿಗೆ ಬಳಸಿಕೊಳ್ಳುವುದು ಅವಳ ಬದುಕಿನ ದುರಂತವೇ ಆಗಿದೆ. ಇದು ಆಕೆಯ ಮಗಳು ಸುಮತಿಯು ನೀಲಕಂಠನನ್ನು ರಿಜಿಸ್ಟರ್ ಮದುವೆ ಮಾಡಿಕೊಳ್ಳುವುದರೊಂದಿಗೆ ಆಘಾತದ ತುದಿಯನ್ನು ಮುಟ್ಟುವಂತೆ ಮಾಡುತ್ತದೆ. ಇದರಿಂದ ನೊಂದ, ಕ್ರೋಧಗೊಂಡ ಆಕೆ ತನ್ನ ಅಸಂಖ್ಯ ಆಭರಣಗಳನ್ನು ಧರಿಸಿ ಚಾಂದಗಢದ ದರ್ಪಣ ಮಂದಿರದ ನಕಲಿನ ಕೊಠಡಿಯಲ್ಲಿ ಆತ್ಮಹತ್ಯೆಗೆ ಶರಣಾಗುತ್ತಾಳೆ. ಈ ಆಭರಣಗಳು ಶಿವಾಪುರದ ಬಡಮಹಿಳೆಯರಿಂದ ಕಿತ್ತುಕೊಂಡಂತಹವು. ಹಾಗಾಗಿ ಮಹಿಳೆಯರ ಆಭರಣ ಮತ್ತು ಸಂತೋಷಗಳನ್ನು ಕಿತ್ತುಕೊಂಡ ಆಕೆಯ ಕ್ರಮಗಳ ವಿರುದ್ಧ ಸನ್ನಿವೇಶವೊಂದು ತಂತಾನೇ ನಿರ್ಮಾಣಗೊಂಡು ಬಂಗಾರಮ್ಮನ ಆತ್ಮಹತ್ಯೆಯಲ್ಲಿ ಅಂತಿಮ ಶಿಕ್ಷೆಯಂತೆ ಕಂಡುಬರುತ್ತದೆ. ಇದಕ್ಕೆ ಅವಳ ಮಗಳು ಸುಮತಿಯು ಬೆಳಗಾವಿಯಲ್ಲಿ ತಾನು ಒಲಿದ ನೀಲಕಂಠನನ್ನು ಮದುವೆಯಾದುದೇ ಕಾರಣವಾಗುತ್ತದೆ. ಆಕೆಯ ಆಶಾಗೋಪುರ ಅಲ್ಲಿಗೆ ಕುಸಿಯುತ್ತದೆ. ತಾನೇ ನಿರ್ಮಿಸಿದ್ದ ಇಡೀ ವ್ಯವಸ್ಥೆಯು ತನ್ನ ಎದುರಿಗೇ ಕುಸಿದ ಅನುಭವ ಅವಳದಾಗುತ್ತದೆ.

ಕಾದಂಬರಿಯ ಎರಡು ಮಹಿಳಾ ಪಾತ್ರಗಳು ಅಸಾಮಾನ್ಯ ವ್ಯಕ್ತಿತ್ವ ಹೊಂದಿವೆ. ಚಾಂದಬೀಯ ಪಾತ್ರವು ಕಂಬಾರರು ಕಂಡ ಕಲಾಪ್ರತಿಭೆಯದ್ದಾದರೆ, ಬಂಗಾರಮ್ಮನ ಪಾತ್ರವು ಕಾಲ್ಪನಿಕವಾಗಿದೆ. ಸಮಾಜವನ್ನು ಪರಿವರ್ತನೆ ಮಾಡುವ ಸಾಮರ್ಥ್ಯ ಹೊಂದಿರುವ ಇವರಿಗೆ ಗುರಿಯಂತೆಯೇ ದಾರಿಯ ಅರಿವು ಸ್ಪಷ್ಟವಾಗಿದೆ. ಬಂಗಾರಮ್ಮನ ಅನೈತಿಕ ಮತ್ತು ಶೋಷಣೆಯ ದಾರಿಯು ಅವಳ ಆತ್ಮಹತ್ಯೆಯಲ್ಲಿ ಕೊನೆಯಾಗುತ್ತದೆ. ಆದರೆ ಕಲಾವಿದೆ

ಶೀಲವಂತೆ ಚಾಂದಬೀಯಾಗಿ, ಚಾಂದಬೀ ಸರಕಾರವಾಗಿ ಗಾಂಧಿ ಮಾರ್ಗದ ಸತ್ಯನಿಷ್ಠೆಯ ಮೂಲಕ ಜನಮನದ ಗೌರವವನ್ನು ಸಂಪಾದಿಸುತ್ತಾಳೆ. ಇದರಿಂದಾಗಿಯೇ ಅಯ್ಯಾ ಸರಕಾರನು ಅವಳ ಮಾನವನ್ನು ಹರಣ ಮಾಡಲು ತನ್ನ ಭಟ್ಟಂಗಿಗಳ ಮೂಲಕ ಪ್ರಯತ್ನಿಸಿದಾಗ ಶಿವಾಪುರದ ಮಹಿಳಾ ಸಂಕುಲವೇ ತಮ್ಮ ಸೀರೆ ಸೆರಗನ್ನು ಚೆಲ್ಲುವ ಮೂಲಕ ಪ್ರತಿಭಟಿಸುತ್ತಾರೆ. ಅವಳಿಗೆ ಮರೆಯಾಗಿ ನಿಂತು ಅವಳ ಮರ್ಯಾದೆಯನ್ನು ಹೊಸ ಎತ್ತರಕ್ಕೆ ಏರಿಸುತ್ತಾರೆ. ಇದಕ್ಕೆಲ್ಲಾ ರಾಜಕಾರಣದ ಚಿತಾವಣೆಗಳು ಹಿನ್ನೆಲೆಯಲ್ಲಿರುತ್ತವೆ. ಚಾಂದಬೀಯು ಮಹಿಳೆಯರಿಗೆ ಭೂಮಿಯನ್ನು ಹಿಂತಿರುಗಿಸುವ ಮೂಲಕ, ಕಲ್ಕಿದಳವನ್ನು ಇಲ್ಲವಾಗಿಸುವ ಮೂಲಕ, ಶಿವಾಪುರದ ಬಾರುಗಳನ್ನು ಮುಚ್ಚಿಸುವ ಮೂಲಕ, ಮಹಿಳೆಯರಿಗೆ ಶಿಕ್ಷಣದ ವ್ಯವಸ್ಥೆ ಮಾಡುವ ಮೂಲಕ ಸಮಾಜವಾದಿ ಪ್ರಜ್ಞೆಯ ಪ್ರಜಾಪ್ರಭುತ್ವವನ್ನು ಸ್ಥಾಪಿಸುವುದೇ ಒಂದು ಮೌನ ಚಳವಳಿಯಂತೆ ಭಾಸವಾಗುತ್ತದೆ.

**ಕೊನೆ ಟಿಪ್ಪಣಿ:**

1. ಚಂದ್ರಶೇಖರ ಕಂಬಾರ, (2021), ಚಾಂದಬೀ ಸರಕಾರ, ಬೆಂಗಳೂರು: ಅಂಕಿತ ಪುಸ್ತಕ, ಮುನ್ನುಡಿಯಲ್ಲಿ.

**ಪರಾಮರ್ಶನ ಗ್ರಂಥಗಳು:**

1. ಚಂದ್ರಶೇಖರ ಕಂಬಾರ, (2021), ಚಾಂದಬೀ ಸರಕಾರ, ಬೆಂಗಳೂರು: ಅಂಕಿತ ಪುಸ್ತಕ.